# ಮಣ್ಣಿನ ಚಿತ್ರಕಾರ



**ಅಮೆರಿಕದ ಸ್ಟ್ಯಾನ್ ಹರ್ಡ್ ಅವರಿಗೆ ಮಣ್ಣೇ ಕ್ಯಾನ್ವಾಸ್. ಎಕರೆಗಟ್ಟಲೆ ಭೂಮಿಯಲ್ಲಿ ಅವರು ಕಲಾಕೃತಿಗಳನ್ನು ಬೆಳೆಯುತ್ತಾರೆ!**

**■ ಪ್ರಿಯಾಂಕ. ವಿ. ಹೆಚ್.**

ಸ್ಟ್ಯಾನ್‌ಹರ್ಡ್



**ಕ**ಲಾವಿದರಿಗೆ ಜಗತ್ತಿನಲ್ಲಿನ ಯಾವ ವಸ್ತು ಬೇಕಾದರೂ ಕ್ಯಾನ್ವಾಸ್ ಆಗಬಲ್ಲದು. ಪುಟ್ಟದೊಂದು ಹಾಳೆಯ ಮೇಲೆ ಓರ್ವ ಕಲಾವಿದ ಚಿತ್ರ ಬಿಡಿಸಿದರೆ, ಮತ್ತೊಬ್ಬ ಕಲಾವಿದನಿಗೆ ತನ್ನ ದೇಹವೇ ಕ್ಯಾನ್ವಾಸ್. ಅಮೆರಿಕದ ಕಲಾವಿದ ಸ್ಟ್ಯಾನ್ ಹರ್ಡ್ ಅವರನ್ನು ನೋಡಿ: ಅವರಿಗೆ ಭೂಮಿಯೇ ಕ್ಯಾನ್ವಾಸ್!

ಮಣ್ಣಿನಲ್ಲಿ ಮೊಳೆಯುವ ಚಿಗುರು, ಗಿಡ–ಮರಗಳು ಕೂಡ ಅದ್ಭುತ ಕಲಾಕೃತಿಗಳೇ! ಇಲ್ಲಿ ನಿಸರ್ಗವೇ ಚಿತ್ರಕಾರ. ಈ ಪ್ರಾಕೃತಿಕ ಚಿತ್ರಕಲೆಯಿಂದ ಪ್ರೇರಣೆ ಪಡೆದಂತೆ, ಮಣ್ಣಿನ ಜೀವಶಕ್ತಿಯನ್ನು ಹರ್ಡ್ ತಮ್ಮ ಕಲಾಕೃತಿಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಅವರದು 'ಕ್ರಾಪ್ ಆರ್ಟ್' (ಬೆಳೆ–ಕಲೆ) ಪ್ರಕಾರ.

ನೆಲವನ್ನೇ ಕ್ಯಾನ್ವಾಸ್ ಮಾಡಿಕೊಂಡಿರುವ ಹರ್ಡ್ ಅನೇಕ ವ್ಯಕ್ತಿಗಳ ಚಿತ್ರಗಳನ್ನು, ಐತಿಹಾಸಿಕ ಸ್ಮಾರಕಗಳ ಚಿತ್ರಗಳನ್ನು ರೂಪಿಸಿದ್ದಾರೆ. ಈ ಕಲಾಕೃತಿಗಳ ರಚನೆಯೂ ಒಂದು ಬಗೆಯ ಕೃಷಿಯೇ. ಭೂಮಿಯನ್ನು ಹದಗೊಳಿಸಿ ಉಳುಮೆ ಮಾಡಿ, ಬೀಜಗಳನ್ನು ಬಿತ್ತಿ, ಸಸಿಗಳನ್ನು ನೆಟ್ಟು ಬೆಳೆಸಿ, ಕಟಾವು ಮಾಡಿ ತಮ್ಮ ಕಲ್ಪನೆಯನ್ನು ಅವರು ಕಲಾಕೃತಿಗಳ ರೂಪದಲ್ಲಿ ಸಾಕಾರಗೊಳಿಸಿದ್ದಾರೆ. ಅಮೆರಿಕದಲ್ಲಿ ಮಾತ್ರವಲ್ಲದೆ, ವಿದೇಶಗಳ ಮಣ್ಣಿನಲ್ಲೂ ಅವರ ಕಲಾಕೃತಿಗಳ ಪ್ರಯೋಗ ನಡೆದಿದೆ.

ಸ್ಟ್ಯಾನ್ ಹರ್ಡ್ ಮೊದಲ ಬಾರಿಗೆ ತಮ್ಮ ಪ್ರಯೋಗ ನಡೆಸಿದ್ದು 1981ರಲ್ಲಿ. 160 ಎಕರೆ ಭೂಮಿಯಲ್ಲಿ 'ಕಿಯೊವಾದ ಕದನ ಕಲಿ' ಎಂದು ಹೆಸರಾಗಿದ್ದ ಸಬಾನಾ ಎನ್ನುವ ವ್ಯಕ್ತಿಯನ್ನು ಅವರು ನೆಲದಲ್ಲಿ ಮೂಡಿಸಿದ್ದರು. ಖ್ಯಾತ ಕಲಾವಿದ ವ್ಯಾನ್ ಗೋ 1889ರಲ್ಲಿ ರಚಿಸಿದ 'ಆಲಿವ್ ಟ್ರೀಸ್' ಕಲಾಕೃತಿ ಕೂಡ ಹರ್ಡ್ ಸೃಜನಶೀಲತೆಯ ಬೆಳೆಕಲೆ ಪರಿಕಲ್ಪನೆಯಲ್ಲಿ ಅತ್ಯದ್ಭುತವಾಗಿ ಮೂಡಿಬಂದಿದೆ. ಇದು ಹಲವಾರು ವಾರಗಳ ಪರಿಶ್ರಮದ ಫಲವಾಗಿ ಮಿನ್ನಿಯಾ ಪೊಲಿಸ್ ವಿಮಾನ ನಿಲ್ದಾಣದ ಹತ್ತಿರವಿರುವ 1.2 ಎಕರೆ ಜಾಗದಲ್ಲಿ ರೂಪುಗೊಂಡಿರುವ ಕಣ್ಮನ ಸೆಳೆಯುವಂತಹ ಚಿತ್ರ.

ಜಪಾನ್‌ನಲ್ಲಿ ಕೂಡ ಸ್ಟ್ಯಾನ್ ಹರ್ಡ್ ಕಲಾಕೃತಿಗಳು ಸಾಕಾರಗೊಂಡು ಸಹೃದಯರ ಗಮನಸೆಳೆದಿವೆ. ರೈತರನ್ನು ನಾವು ಮಣ್ಣಿನ ಮಕ್ಕಳು ಎನ್ನುತ್ತೇವಷ್ಟೇ. ಅದೇ ರೀತಿಯಲ್ಲಿ, ನಿಸರ್ಗವನ್ನೇ ತನ್ನ ಕ್ಯಾನ್ವಾಸ್ ಆಗಿಸಿಕೊಂಡಿರುವ ಹರ್ಡ್ ಅವರನ್ನು 'ಮಣ್ಣಿನ ಚಿತ್ರಕಾರ' ಎನ್ನಬಹುದೇನೋ?

